ವಿಶಾಖ ಎನ್.

# ಗೌತಮ ವಲಸೆ; ಮಾತಲ್ಲಿ ಬೇಸರದ ಪಸೆ



ಗೌತಮ್ ಮೆನನ್, ಮಮ್ಮುಟ್ಟಿ

'ಊಲಾಲಾ' ಎಂಬ ಒಂದು ಕಥೆ ಸಿದ್ಧ ಮಾಡಿಟ್ಟುಕೊಂಡು, ಗೌತಮ್ ವಾಸುದೇವನ್ ಮೆನನ್ ಚಿತ್ರರಂಗಕ್ಕೆ ಕಾಲಿಟ್ಟರು. ಮೊದಲು ಚಿತ್ರ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಿದ್ದ ನಿರ್ಮಾಪಕರು ಆಮೇಲೆ ಕೈ ಎತ್ತಿದರು.

ಮಾಧವನ್ ಆಗಿನ್ನೂ ಹೊಸ ನಟ. ಅವರಿಗೆ ಕಥೆ ಇಷ್ಟವಾಯಿತು. ಆಗ ಮಣಿರತ್ನಂ ಒಂದು ವಿಧದಲ್ಲಿ ಮಾಧವನ್ ಅವರಿಗೆ ಮಾನಸಿಕ ಗುರು. ಕಥೆಯನ್ನು ಒಮ್ಮೆ ಅವರಿಗೆ ಹೇಳಿಬಿಡೋಣ ಎಂದು ಅವರು ಕೇಳಿಕೊಂಡರು. ಗೌತಮ್ ಮೊದಲಿಗೆ ಹಿಂಜರಿದರೂ, ಹಿರಿಯರ ಒಪ್ಪಿಗೆ ಪಡೆಯುವುದರಲ್ಲಿ ತಪ್ಪೇನು ಎಂದು ಒಪ್ಪಿದರು. ಶ್ರದ್ಧೆಯಿಂದ ಕಥೆ ಹೇಳಿದರು.

'ಈ ಕಥೆ ಸಿನಿಮಾ ಆಗಿ ಕ್ಲಿಕ್ ಆಗಲ್ಲ' ಎಂದು ಮಣಿ ಹೇಳಿದ್ದೇ ಗೌತಮ್ ತಲೆಯೊಳಗೆ ಹುಳ ಬಿಟ್ಟಂತೆ ಆಯಿತು. ತಮ್ಮ ಪ್ರೀತಿಯ ಆಗ್ರಹ ಹೀಗೆ ಆಗುತ್ತೆ ಎಂದು ಅರಿಯದೆ ಇದ್ದ ಮಾಧವನ್ ಆಗ ಪೇಚಾಡಿಕೊಂಡರು. ಕೊನೆಗೆ ಅದೇ ಕಥೆಗೆ ಬೇರೆ ನಿರ್ಮಾಪಕರು ಸಿಕ್ಕರು. ಸಿನಿಮಾ ಹೆಸರು ಕೂಡ 'ಮಿನ್ನಲೆ' ಎಂದು ಬದಲಾಯಿತು. ಮಾಧವನ್ ಜೊತೆಗೆ ಅಬ್ಬಾಸ್ ಕೂಡ ಅದರಲ್ಲಿ ಅಭಿನಯಿಸಿದರು. ಹ್ಯಾರಿಸ್ ಜಯರಾಜ್ ಎಂಬ ಹೊಸ ಸಂಗೀತ ನಿರ್ದೇಶಕನಿಗೆ ಅದು ಪದಾರ್ಪಣೆ ಸಿನಿಮಾ ಆಯಿತು. ತಂತ್ರಜ್ಞರ ತಂಡದಲ್ಲಿ ಇದ್ದ ಒಬ್ಬರೇ ಅನುಭವಿ ಎಂದರೆ, ಕನ್ನಡದವರೇ ಆದ ಸಂಕಲನಕಾರ ಸುರೇಶ್ ಅರಸ್.

2021ರಲ್ಲಿ 'ವ್ಯಾಲೆಂಟೈನ್ಸ್ ಡೇ' ಹೊತ್ತಿಗೆ ಆ ಚಿತ್ರ ತೆರೆಕಂಡಿತು. ನಟಭೈರವಿ ರಾಗದ 'ವಸೀಗರ' ಹಾಡನ್ನು ಬಾಂಬೆ ಜಯಶ್ರೀ ಆ ಚಿತ್ರಕ್ಕೆ ಹಾಡಿದ್ದರು. ಅದೂ ಸೇರಿದಂತೆ ಹಾಡುಗಳೆಲ್ಲ ತಂಗಾಳಿ ಬೀಸಿದಂತಹ ಅನುಭವವನ್ನು ಪ್ರೇಕ್ಷಕರಿಗೆ ನೀಡಿದವು. ಸಿನಿಮಾ ದೊಡ್ಡ ಹಿಟ್ ಆಯಿತು. ರೀಮಾ ಸೇನ್ ನಾಯಕಿಯಾಗಿದ್ದ ಆ ಚಿತ್ರವೇ ಆಮೇಲೆ ಹಿಂದಿಗೂ ರೀಮೇಕ್ ಆಗಿ ಗೆದ್ದಿತು. ಹೀಗೆ ಗೌತಮ್ ವಾಸುದೇವನ್ ಮೆನನ್ ತಮಿಳು ಚಿತ್ರರಂಗಕ್ಕೆ ಭರ್ಜರಿ ಪ್ರವೇಶ ಕೊಟ್ಟಿದ್ದವರು.

ಅವರಿಗೆ ಈಗ ತಮ್ಮ 'ಧ್ರುವನಚ್ಚತ್ತಿರಂ' ಸಿನಿಮಾ ಬಿಡುಗಡೆ ಮಾಡಲು ಸಾಧ್ಯ ಆಗುತ್ತಿಲ್ಲ. ವಿಕ್ರಮ್ ಅಭಿನಯದ ಚಿತ್ರ ಹಲವು ಸಮಸ್ಯೆಗಳಲ್ಲಿ ಸಿಲುಕಿಕೊಂಡಿದೆ.

ಈ ಚಿತ್ರವನ್ನು ಖುದ್ದು ಗೌತಮ್ ನಿರ್ಮಿಸಲು ಉದ್ದೇಶಿಸಿದ್ದರು. ಸೂರ್ಯ ನಾಯಕರಾಗಿ ನಟಿಸಲು ಒಪ್ಪಿದ್ದರು. ಇಬ್ಬರ ನಡುವೆ ಕಥಾ ವಿಸ್ತರಣೆಯ ಚರ್ಚೆ ನಡೆದ ನಂತರ ಸೂರ್ಯ ಯಾಕೋ ಹಿಂದಡಿ ಇಟ್ಟರು. ಅದೇ ಕಥೆಯನ್ನು ವಿಕ್ರಮ್ ಒಪ್ಪಿ, ಬೇರೆ ನಿರ್ಮಾಪಕರನ್ನು ಕೂಡ ಹುಡುಕಿಕೊಟ್ಟರು. ಆದಾಗ್ಯೂ ಚಿತ್ರಕ್ಕೆ ಇನ್ನೂ ತೆರೆಕಾಣುವ ಭಾಗ್ಯ ಬಂದಿಲ್ಲ.

ಇಷ್ಟರ ನಡುವೆ ಗೌತಮ್, ಮಲೆಯಾಳಂ ಭಾಷೆಯಲ್ಲಿ 'ಡಾಮಿನಿಕ್ ಅಂಡ್ ಲೇಡೀಸ್' ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಮಮ್ಮುಟ್ಟಿ ಅದರ ನಾಯಕ. ತಮ್ಮನ್ನು ಮಮ್ಮುಟ್ಟಿ ನಂಬಿದರು. ಸೂರ್ಯ ಅವರಂತಹ ನಟ ನಂಬಲಿಲ್ಲ ಎಂದು ಗೌತಮ್ ಇತ್ತೀಚೆಗೆ ಬೇಸರವನ್ನೂ ಹೊರಹಾಕಿದರು. 'ಕಾಖಾ ಕಾಖಾ' ಹಾಗೂ 'ವಾರಣಂ ಆಯಿರಂ' ಚಿತ್ರಗಳನ್ನು ಗೌತಮ್ ಅವರು ನಟ ಸೂರ್ಯ ಅವರಿಗೆ ನಿರ್ದೇಶಿಸಿದ ಹಿನ್ನೆಲೆಯಿದ್ದೂ ಈ ಬದಲಾವಣೆ ಆಗಿದೆ.

ತಮಿಳು ಚಿತ್ರರಂಗದಲ್ಲಿ ಈಗ ತಾವು ಮಾಡುವ ಭಾವುಕ ಕತೆಗಳನ್ನು ಕೇಳುವ ಸ್ಟಾರ್ ನಟರು ಇಲ್ಲ ಎಂಬ ಕೊರಗನ್ನೂ ಗೌತಮ್ ಕೆಲವು ಸಂದರ್ಭಗಳಲ್ಲಿ ಹೇಳಿಕೊಂಡಿದ್ದಾರೆ. ಬಹುಶಃ ಅದಕ್ಕೇ ಅವರಿಗೆ ಮಲೆಯಾಳಂ ಸಿನಿಮಾ ಓಯಸಿಸ್ ಆಗಿ ಒದಗಿಬಂದಿದೆ.

## ಉಪಮುಖ್ಯಮಂತ್ರಿ ಪತ್ನಿಯ ಸಿನಿಮಾ ಪ್ರೀತಿ



ಕೃತಿಕಾ ಉದಯನಿಧಿ ಸ್ಟಾಲಿನ್

ಕೃತಿಕಾ ಉದಯನಿಧಿ ನಾಲ್ಕನೇ ತಮಿಳು ಸಿನಿಮಾ ನಿರ್ದೇಶಿಸಿ ಇತ್ತೀಚೆಗೆ ನೆಮ್ಮದಿಯ ನಿಟ್ಟುಸಿರು ಬಿಟ್ಟರು. 'ಕಾದಲಿಕ್ಕ ನೆರಮಿಲ್ಲೈ' ಶೀರ್ಷಿಕೆಯ ಈ ಸಿನಿಮಾ ದೊಡ್ಡ ಹಿಟ್ ಆಗಲಿಲ್ಲವಾದರೂ ನಿರ್ದೇಶಕಿಯಾಗಿ ಕೃತಿಕಾ ಬೆಳವಣಿಗೆಗೆ ಕನ್ನಡಿ ಹಿಡಿದಿದೆ. ವಿಮರ್ಶಕರು ಅವರ ಈ ಚಿತ್ರವನ್ನು ಮೆಚ್ಚಿಕೊಂಡಿದ್ದಾರೆ.

ತಮಿಳುನಾಡಿನ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರ ಪತ್ನಿ ಕೃತಿಕಾ. ಆ ರಾಜ್ಯದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸೊಸೆ. ಹಣ ಹೊಂಚುವುದು ಅವರಿಗೆ ಸಲೀಸು ಇರಬಹುದು. ಸಿನಿಮಾ ಸೃಜನಶೀಲತೆಗೆ ಅಷ್ಟೇ ಸಾಕಾಗದು. ಅವರು ಒಂದೊಂದು ಚಿತ್ರದಲ್ಲೂ ಭಿನ್ನ ರೀತಿಯ ಶೈಲಿಯನ್ನು ಅಳವಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

'ಸುರೇಶ್ ರವಿ (ಜಯಂ ರವಿ ಈ ರೀತಿ ಈಗ ಹೆಸರು ಬದಲಿಸಿಕೊಂಡಿದ್ದಾರೆ) ನನ್ನ ಜೊತೆಗೆ ಕಥಾ ವಿಸ್ತರಣೆಗೆ ಕುಳಿತಿದ್ದರು. ಅವರೇ ಸಿನಿಮಾ ನಾಯಕರು ಎಂದು ಆಗಲೇ ನಿರ್ಧರಿಸಿದೆ. ನಿತ್ಯಾ ಮೆನನ್ ಹಾಗೂ ಅವರನ್ನು ಜೋಡಿಯಾಗಿಸುವ ಯೋಚನೆಯನ್ನು ಯಾರೂ ಇದುವರೆಗೆ ಮಾಡಿರಲಿಲ್ಲ. ಆ ಪ್ರಯೋಗವನ್ನು ನಾನು ಮಾಡಿದೆ. ನಿತ್ಯಾ ನಾನು ಕಂಡ ಅದ್ಭುತ ನಟಿ, ವ್ಯಕ್ತಿ. ಅವರೊಟ್ಟಿಗೆ ಕೆಲಸ ಮಾಡುತ್ತಲೇ ಕಲಿತ ವಿಷಯಗಳು ಹಲವು. ಸಿನಿಮಾ ಹಣ ಗಳಿಕೆಯಲ್ಲಿ ಮುಂದೆ ಇರಬೇಕು ಎಂಬ ಬಯಕೆ ನನ್ನದೂ ಹೌದು. ಆದರೂ ಸೃಜನಶೀಲ ಪ್ರಯೋಗಕ್ಕೆ ಅದು ವೇದಿಕೆ ಎಂದು ನಂಬಿರುವವಳು ನಾನು' ಎಂಬ ಕೃತಿಕಾ ಮಾತು ಅವರ ಉತ್ಕಟತೆಗೆ ಕನ್ನಡಿ ಹಿಡಿಯುತ್ತದೆ.